## ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ1(4)ವರ್ಗಾವಣೆ/01/2020-21 ದಿನಾಂಕ:14/12/2020

### ಜ್ಞಾಪನ

**ವಿಷಯ:**-2019-20ನೇ ಸಾಲಿನಲ್ಲಿ ಕಡ್ಡಾಯ/ಹೆಚ್ಚುವರಿಯಾಗಿ ತಾಲ್ಲೂಕಿನಿಂದ/ಜಿಲ್ಲೆಯಿಂದ ಹೊರಗಡೆ ವರ್ಗಾವಣೆಯಾಗಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳಿಗೆ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ನಡೆಸುವ ಬಗ್ಗೆ.

**ಉಲ್ಲೇಖ:**-1.ಸರ್ಕಾರದ ಪತ್ರ ಸಂಖ್ಯೆ ಇಡಿ 26 ಇಟಿಆರ್ 2020 ದಿನಾಂಕ.05.10.2020
2.ಈ ಕಛೇರಿ ಅಧಿಕೃತ ಜ್ಞಾಪನ ಸಮ ಸಂಖ್ಯೆ ದಿನಾಂಕ:11/11/2020
3.ಅಪರ ಆಯುಕ್ತರು ಕಲಬುರಗಿ ರವರ ಪತ್ರ ದಿನಾಂಕ.11.12.2020

*****

2020-21ನೇ ಸಾಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರುಗಳು ವೃಂದದ ಶಿಕ್ಷಕರುಗಳ ಕೋರಿಕೆ ವರ್ಗಾವಣೆಗಳನ್ನು ನಡೆಸುವ ಸಂಬಂಧ ಉಲ್ಲೇಖ[7]ರಲ್ಲಿ ಮಾರ್ಗಸೂಚಿಯನ್ನು ಹೊರಡಿಸಿದ್ದು, ವರ್ಗಾವಣಾ ಪ್ರಕ್ರಿಯೆಗಳನ್ನು ನಿರ್ವಹಿಸಬೇಕಾದ ವೇಳಾ ಪಟ್ಟಿಯನ್ನು ಸಹ ತಿಳಿಸಲಾಗಿರುತ್ತದೆ. ಸದರಿ ಮಾರ್ಗಸೂಚಿಯಲ್ಲಿ ಹೊರಡಿಸಲಾಗಿದ್ದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮತ್ತು ಅನುಬಂಧ-1 ,ಅನುಬಂಧ-2 , ಅನುಬಂಧ-3 ವೇಳಾ ಪಟ್ಟಿಯಲ್ಲಿ ಉಲ್ಲೇಖ[2]ರಂತೆ ನಿಗಧಿಪಡಿಸಲಾಗಿದ್ದ ಕೆಲವೊಂದು ದಿನಾಂಕಗಳನ್ನು ಕೆಳಕಂಡ ಕಾರಣಗಳಿಂದಾಗಿ ಮಾರ್ಪಾಡು ಮಾಡಲಾಗಿರುತ್ತದೆ.

1.ಡಿ.ಡಿ.ಓ ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ರವರುಗಳ ಹಂತದಲ್ಲಿ ಶಿಕ್ಷಕರ ಸೇವಾ ಮಾಹಿತಿಯನ್ನು [EEDS] ತಂತ್ರಾಂಶದಲ್ಲಿ ಇಂದೀಕರಿಸುವ ಕಾರ್ಯವನ್ನು ಮತ್ತು ಮತ್ತು ಪದೋನ್ನತಿ ಹೊಂದಿದ ಶಿಕ್ಷಕರ ಮಾಹಿತಿಯನ್ನು ಗಣಕೀಕರಣಗೊಳಿಸುವ ಕಾರ್ಯವನ್ನು ಸಕಾಲದಲ್ಲಿ ಪೂರ್ಣಗೊಳಿಸದೇ ಇರುವುದು.

2.ಉಪನಿರ್ದೇಶಕರು[ಆಡಳಿತ] ರವರುಗಳ ಹಂತದಲ್ಲಿ ಮಂಜೂರಾದ ಹುದ್ದೆಗಳಿಗೆ [EEDS] ತಂತ್ರಾಂಶದಲ್ಲಿ ಶಿಕ್ಷಕರ ಮಾಹಿತಿಯಲ್ಲಿ ಬದಲಾವಣೆ ಆಗಿರುವುದರಿಂದ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ಮಾಹಿತಿಗಳನ್ನು ಮಂಜೂರಾದ ಹುದ್ದೆಗಳಿಗೆ ಮ್ಯಾಪಿಂಗ್ ಮಾಡುವ ಕಾರ್ಯವನ್ನು ಪೂರ್ಣಗೊಳಿಸದೇ ಇರುವುದು.

3.ಕಲಬುರುಗಿ ಆಯುಕ್ತಾಲಯ ವ್ಯಾಪ್ತಿಯಲ್ಲಿ ಶಿಕ್ಷಕರ ವೃಂದಗಳಲ್ಲಿ ಪದೋನ್ನತಿ ನೀಡುವ ಕಾರ್ಯ ಪ್ರಸ್ತುತ ಹಂತದಲ್ಲಿ ಚಾಲ್ತಿಯಲ್ಲಿರುವುದು.

4.ಪ್ರಸ್ತುತ ರಾಜ್ಯಾದ್ಯಾಂತ ಗ್ರಾಮ ಪಂಚಾಯತ್ ಚುನಾವಣೆ-2020ರ ಚುನಾವಣಾ ಪ್ರಕ್ರಿಯೆಗಳು ಚಾಲ್ತಿಯಲ್ಲಿದ್ದು, ದಿನಾಂಕ:22/12/2020 ಮತ್ತು 27/12/2020 ಗಳಂದು ಎರಡು ಹಂತದಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ಶಿಕ್ಷಕರನ್ನು 16/12/2020 ರಿಂದ ಚುನಾವಣಾ ಪ್ರಕ್ರಿಯೆಗೆ ನಿಯುಕ್ತಿಗೊಳಿಸಿರುವುದರಿಂದ.

ಮೇಲ್ಕಂಡ ಕಾರಣಗಳಿಂದಾಗಿ ವರ್ಗಾವಣಾ ಪ್ರಕ್ರಿಯೆ ದಿನಾಂಕಗಳನ್ನು ಮುಂದೂಡುವ ಅನಿವಾರ್ಯತೆ ಉಂಟಾಗಿರುವ ಹಿನ್ನೆಲೆಯಲ್ಲಿ ಉಲ್ಲೇಖ[2]ರಂತೆ ದಿನಾಂಕ:11/11/2020ರಲ್ಲಿ ಹೊರಡಿಸಿದ್ದ ವೇಳಾಪಟ್ಟಿಯನ್ನು ಮಾರ್ಪಡಿಸಿದ್ದು ಮುಂದಿನಂತೆ ಇರುತ್ತದೆ. ಸಕ್ಷಮ ಪ್ರಾಧಿಕಾರಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳು ಮಾರ್ಪಡಿಸಿರುವ ದಿನಾಂಕಗಳಂದು ಸೂಚಿಸಲಾಗಿರುವ ಕಾರ್ಯಗಳನ್ನು ತಪ್ಪದೇ ನಿರ್ವಹಿಸಲು ತಿಳಿಸಿದೆ.

**ಮಾರ್ಗಸೂಚಿ**

| ಕ್ರ.ಸಂ. | ವಿವರಣೆ | ದಿನಾಂಕ | ನಿರ್ವಹಿಸುವ ಪ್ರಾಧಿಕಾರ |
|---|---|---|---|
| 01 | ವರ್ಗಾವಣೆ ಅಧಿಸೂಚನೆ ವೇಳಾ ಪಟ್ಟಿ ಪ್ರಕಟಣೆ | 11.11.2020 | ಆಯುಕ್ತರ ಕಛೇರಿ |
| 02 | ಕಡ್ಡಾಯ/ಹೆಚ್ಚುವರಿಯಾಗಿ ತಾಲ್ಲೂಕು/ ಜಿಲ್ಲೆಯಿಂದ ಹೊರಗೆ ವರ್ಗಾವಣೆಗೊಂಡ ಶಿಕ್ಷಕರ ಪಟ್ಟಿ ಪ್ರಕಟಣೆ | 17.11.2020 | ಆಯುಕ್ತರ ಕಛೇರಿ |

[ಪುಟ...2ಕ್ಕೆ]

| ಕ್ರ.ಸಂ. | ವಿವರಣೆ | ದಿನಾಂಕ | ನಿರ್ವಹಿಸುವ ಪ್ರಾಧಿಕಾರ |
|---|---|---|---|
| 03 | ಮೇಲ್ಕಂಡಂತೆ ಪ್ರಕಟಿಸಲಾದ ಪಟ್ಟಿಗೆ ಶಿಕ್ಷಕರಿಂದ ಆಕ್ಷೇಪಣೆಗಳು ಸಲ್ಲಿಕೆಯಾದಲ್ಲಿ, ಅವುಗಳನ್ನು ಪರಿಶೀಲಿಸಿ ಅಂತಿಮಗೊಳಿಸುವುದು | 20.11.2020 ರಿಂದ 23.11.2020 | ಉಪನಿರ್ದೇಶಕರು(ಆಡಳಿತ) |
| 04 | ಪಟ್ಟಿಯಲ್ಲಿ ಪ್ರಕಟವಾದ ಆಸಕ್ತ ಶಿಕ್ಷಕರು ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವುದು. | 24.11.2020 ರಿಂದ 30.11.2020 | ಆಸಕ್ತ ಶಿಕ್ಷಕರು |
| 05 | ತಂತ್ರಾಂಶದಲ್ಲಿ ಅರ್ಜಿಗಳನ್ನು ಅಂತಿಮಗೊಳಿಸುವುದು. | 01.12.2020 ರಿಂದ 05.12.2020 | ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು |
| 06 | ಅಂತಿಮ ಕೌನ್ಸೆಲಿಂಗ್ ಅರ್ಹತಾ ಪಟ್ಟಿ ಪ್ರಕಟಣೆ | 23.12.2020 | ಉಪನಿರ್ದೇಶಕರು(ಆಡಳಿತ) |
| 07 | ಕೌನ್ಸಿಲಿಂಗ್ ಪ್ರಕ್ರಿಯೆ(ಪ್ರಾಥಮಿಕ) | 28.12.2020 ರಿಂದ 29.12.2020 | ಉಪನಿರ್ದೇಶಕರು(ಆಡಳಿತ) |
| 08 | ಕೌನ್ಸಿಲಿಂಗ್ ಪ್ರಕ್ರಿಯೆ(ಪ್ರೌಢ) | 31.12.2020 | ಸಂಬಂಧಿಸಿದ ವಿಭಾಗೀಯ ಸಹನಿರ್ದೇಶಕರು |

**[ಅನ್ಬುಕುಮಾರ್ .ವಿ.]**
**ಆಯುಕ್ತರು**

**ಇವರಿಗೆ, ಅಗತ್ಯ ಕ್ರಮಕ್ಕಾಗಿ**

1. ನಿರ್ದೇಶಕರು, ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ
2. ಜಂಟಿ ನಿರ್ದೇಶಕರು [ಆಡಳಿತ] ಆಯುಕ್ತರ ಕಛೇರಿ, ಬೆಂಗಳೂರು
3. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು[ಆಡಳಿತ] ರವರ ಮೂಲಕ)

**ಪ್ರತಿಯನ್ನು:-**

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರ ಆದ್ಯ ಅವಗಾಹನೆಗಾಗಿ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ .
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರುಗಿ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ.

**[ಪುಟ...3ಕ್ಕೆ]**

9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು ರವರಿಗೆ.
10. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-01 ರವರಿಗೆ ಪ್ರತಿಯನ್ನು ರವಾನಿಸುತ್ತಾ, ಉದ್ದೇಶಿತ ವರ್ಗಾವಣೆ ಪ್ರಕ್ರಿಯೆಗೆ "ತಂತ್ರಾಂಶವನ್ನು" ನಿಯಮಗಳಡಿ ಸಜ್ಜುಗೊಳಿಸಿ ಯಾವುದೇ ಲೋಪಗಳು ಉದ್ಭವಿಸದಂತೆ, ಸೂಕ್ತ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
11. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
12. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
13. ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಣೆಗಾಗಿ ಇ-ಆಡಳಿತ ಶಾಖೆಗೆ.
14. ಕಛೇರಿ ಪ್ರತಿ.